ದಿನಾಂಕಃ 21.06.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ. ಎಸ್.ಎಸ್., ವಕೀಲರಿಂದಃ

1. ನಾನು ಮತ್ತು 2 ನೇ ವಾದಿ ಅನಕ್ಷರಸ್ಥರು. ನಮ್ಮ ವಕೀಲರು ದಾವೆ ಸಲ್ಲಿಸಲು ನಾವೇ ಮಾಹಿತಿ ನೀಡಿದ್ದೇವೆ. ವಾದ ಪತ್ರವನ್ನು ವಕೀಲರ ಮೂಲಕ ಓದಿಸಿ ತಿಳಿದು ಕೊಂಡಿಲ್ಲ. 2 ನೇ ಪ್ರತಿವಾದಿ ಸಲ್ಲಿಸಿರುವ ತಕರಾರನ್ನು ಸಹ ನಾನು ಓದಿಸಿ ತಿಳಿದುಕೊಂಡಿಲ್ಲ. ನಮ್ಮ ತಾತಾನ ಸ್ವತ್ತಿನಲ್ಲಿ ವಿಭಾಗ ಕೋರಿ ದಾವೆ ಸಲ್ಲಿಸಿದ್ದೇನೆ. ದಾವಾ ಷೆಡೂಲ್ ಸ್ವತ್ತುಗಳ ಪೈಕಿ ಎರಡು ಸ್ವತ್ತುಗಳು ಮಾತ್ರ ನಮ್ಮ ತಾತಾನ ಹೆಸರಿನಲ್ಲಿ ಇದೆ. ಉಳಿದ ಸ್ವತ್ತುಗಳು ನಮ್ಮ ತಂದೆ ಹೆಸರಿನಲ್ಲಿ ಇದೆ. ನಮ್ಮ ತಾತಾನ ಹೆಸರಿನಲ್ಲಿ ಸ್ವತ್ತುಗಳು ಇವೆ ಎಂದು ತೋರಿಸಲು ಪಹಣಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ದಾವಾ ಷ್ಹ್ಯೂಲ್ ಸ್ವತ್ತುಗಳಲ್ಲಿ ಎಂಟು ಭಾಗಗಳಾಗ ಬೇಕು.

2. ನಮ್ಮ ತಂದೆ ಹೆಸರು ಕುನ್ನೇಗೌಡ, ತಾಯಿಯ ಹೆಸರು ಕಾಳಮ್ಮ. ನಮ್ಮ ತಂದೆ ತಾಯಿ ಯಾವ ವರ್ಷದಲ್ಲಿ ಮರಣ ಹೊಂದಿದ್ದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಬದುಕಿದ್ದ ಕಾಲದಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ನಮ್ಮ ತಂದೆ ಬದುಕ್ಕಿದಾಗಲೇ ವ್ಯವಸಾಯದ ಜಮೀನು ಇತ್ತು. ಸದರಿ ಜಮೀನಿನ ಸರ್ವೇ ನಂಬರ್ ಗೊತ್ತಿಲ್ಲ. ನಮ್ಮ ತಂದೆಗೆ ಒಟ್ಟು ಎಂಟು ಜನ ಮಕ್ಕಳು. ರಾಮಕೈಷ್ಣ, ಪುಟ್ಟಸ್ವಾಮಿ, ಜಯಮ್ಮ, ಗೋಪಾಲ್, ಜಯರಾಮ್, ಶಿವಣ್ಣ, ರಾಮಚಂದ್ರ ಮತ್ತು ಸಾವಿತ್ರಿ.

3. ರಾಮಕೈಷ್ಣ ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ಡ್ರೈವರ್ ಅಗಿ ಕೆಲಸ ಮಾಡುತ್ತಿದ್ದರು. ಸದರಿರವರಿಗೆ ಸುಮಾರು 60 ವರ್ಷಗಳಿಂದ ಹಿಂದೆಯೇ ಮದುವೆ ಆಗಿತ್ತು. 2 ನೇ ವಾದಿ, 2 ನೇ ಪ್ರತಿವಾದಿ ರಿಂದ 4 ನೇ ಪ್ರತಿವಾದಿ ರವರು ಕೂಲಿ ಕೆಲಸ ಮಾಡುತ್ತಿದ್ದರು. ಸದರಿ ಯವರಿಗೆ ಸುಮಾರು 30-40 ವರ್ಷಗಳ ಹಿಂದಯೆ

ಮದುವೆಗಳು ಆಗಿದೆ. ನಾನು ಪಿ.ಡಬ್ಲ್ಯೂಡಿ ಇಲಾಖೆಯಲ್ಲಿ ಗ್ಯಾಂಗ್‌ಮನ್ ಆಗಿ ಕೆಲಸ ಮಾಡುತ್ತಿದ್ದೆ. ನನಗೆ ಸುಮಾರು 45 ವರ್ಷಗಳ ಹಿಂದೆಯೆ ಮದುವೆ ಆಗಿದೆ. ಒಬ್ಬ ಹೆಣ್ಣು ಮಗಳಿಗೆ ಮೊದಲೇ ವಿವಾಹ ಅಗಿತ್ತು. ಮತ್ತೊಬ್ಬ ಹೆಣ್ಣು ಮಗಳಿಗೆ ನಮ್ಮ ಅಣ್ಣ ತಮ್ಮಂದಿರ ವಿವಾಹವಾದ ನಂತರ ಅವಳಿಗೆ ವಿವಾಹ ಮಾಡಲಾಯಿತು. ನಮ್ಮ ಎಲ್ಲಾ ಮದುವೆಗಳಿಗು ನಮ್ಮ ತಂದೆ ತಾಯಿ ಇದ್ದರು. ನಮ್ಮ ಎಲ್ಲಾರ ವಿವಾಹ ಖರ್ಚು ವೆಚ್ಚಗಳು ನಮ್ಮ ತಂದೆ ತಾಯಿ ಭರೆಸಿದ್ದರು ಎಂದರೆ ಸರಿ. ಪ್ರಸ್ತುತ ನಾನು ಕನಕಪುರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಮ್ಮ ಅಣ್ಣ ತಮ್ಮಂದಿರು ಎಲ್ಲರೂ ಮದುವೆಯ ನಂತರ ಪ್ರತ್ತೇಕವಾಗಿ ವಾಸವಾಗಿರುತ್ತೇವೆ ಎಂದರೆ ಸರಿ.

4. ನಮ್ಮ ತಂದೆಯ ಜೀವಿತ ಅವಧಿಯಲ್ಲಿ ನಾವು ಯಾರು ಸಹ ಭಾಗ ಕೇಳಿರಲಿಲ್ಲ. ನಮ್ಮ ತಮ್ಮ ರಾಮಚಂದ್ರರವರು ಬಿ.ವಿ.ಹಳ್ಳಿ ಯಲ್ಲಿ ವಾಸವಾಗಿದ್ದಾರೆ. ಸದರಿಯವರ ವಿರುದ್ದ ವರದಕ್ಷಿಣ ಕಿರುಕುಳ ದೂರು ದಾಖಲಾಗಿತ್ತು ಎಂದರೆ ಸರಿ. ಸದರಿಯವರು ಪ್ರಕರಣ ದಾಖಲಾದ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಗೋಪಾಲರವರ ಪತ್ನಿಯ ಹೆಸರು ಸರಸ್ವತಿ. ಸದರಿ ಸರಸ್ವತಿರವರು ನನ್ನ ಅಕ್ಕ ಜಯಮ್ಮನವರ ಮಗಳು ಎಂದರೆ ಸರಿಯಲ್ಲ. ಸದರಿ ಯವರು ಅಂಗನವಾಡಿ ಶಿಕ್ಷಕಿ ಎಂದರೆ ಸರಿ. ಸದರಿ ಸರಸ್ವತಿರವರ ತಂದೆ ಖರೀದಿಸಿದ ಮೂರು ಗುಂಟೆ ಜಮೀನಿನಲ್ಲಿ ಗೋಪಾಲರವರು ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ನನ್ನ ತಮ್ಮ ಶಿವಣ್ಣ ನವರ ಪತ್ನಿ ಸಹೋದರ ಮಾವ ಚಿಕ್ಕೇಗೌಡರವರ ಮಗಳು ಅವರು ಬಿ.ವಿ.ಹಳ್ಳಿರವರೆ ಎಂದರೆ ಸರಿ. ನಮ್ಮ ಸಹೋದರ ಮಾವನವರಿಗೆ ಗಂಡು ಮಕ್ಕಳಿಲ್ಲ ಎಂದರೆ ಸರಿ. ಆದ ಕಾರಣ ನಿಮ್ಮ ತಮ್ಮ ಅವರ ಮನೆಗೆ ಹೋಗಿ ಸೇರಿಕೊಂಡಿದ್ದರು. ಸದರಿ ನಿಮ್ಮ ಸಹೋದರ ಮಾವನವರು ಹೆಣ್ಣು ಮಕ್ಕಳಿಗೆ ಭಾಗ ನೀಡುವ ಸಂದರ್ಭದಲ್ಲಿ ನಿಮ್ಮ ತಮ್ಮನಿಗೂ ಸಹ ಎರಡು ಎಕರೆ ಜಮೀನು ಮತ್ತು ಒಂದು ಮನೆ ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂಗಿ ಜಯಮ್ಮ ರವರು ಬಿ.ವಿ.ಹಳ್ಳಿಗೆ ಕೊಟ್ಟಿರುವುದು ಎಂದರೆ ಸರಿ. ಸದರಿ ಜಯಮ್ಮ ರವರು ಮನೆ ಕಟ್ಟಿಕೊಂಡು ವಾಸ ಇರುವ ಸ್ಥಳ

ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ನಾನು ಮನೆ ಕಟ್ಟಿಕೊಂಡು ವಾಸವಿರುವ ಸ್ಥಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ನಾಲ್ಕು ಗುಂಟೆ ಜಮೀನಲ್ಲಿರುವ ಷಡ್ ನಲ್ಲಿ ನಮ್ಮ ತಾಯಿ ಕಾಳಮ್ಮನವರು ವಾಸವಾಗಿದ್ದರು, ಸದರಿ ಜಮೀನು ಪಿತ್ರಾರ್ಜಿ ಸ್ವತ್ತು ಎಂದರೆ ಸರಿ. ಮೇಲೆ ಹೇಳಿದ ಮೂರು ವಾಸದ ಮನೆಗಳು ನಮ್ಮ ಹೆಸರಿನಲ್ಲಿ ಖಾತೆ ಆಗಿದೆ ಎಂದರೆ ಸಾಕ್ಷಿ ನಾನು ವಾಸವಾಗಿರು ಮನೆಯನ್ನು ಹೊರತು ಪಡಿಸಿ ಉಳಿದ ಎರಡು ಮನೆಗಳಿಗೂ ಖಾತೆ ಆಗಿದೆ. ಸದರಿ ಮೂರು ಮನೆಗಳನ್ನು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಾಯಿ ವಾಸವಾಗಿದ್ದ ನಾಲ್ಕು ಗುಂಟೆ ಜಮೀನಿನಲ್ಲಿದ್ದ ಷಡ್‌ನ್ನು ಸೇರಿಸಿದ್ದೇವೆ ಉಳಿದ ಎರಡು ಮನೆಗಳನ್ನು ಸೇರಿಸಿಲ್ಲ.

**(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ಎನ್.ಉಷಾರಾಣಿ )
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಚನ್ನಪಟ್ಟಣ.**